1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 92/2021

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರೀತಿ | ಪಿಡಬ್ಲೂ -08 |
| ತಂದೆಯ ಹೆಸರು | - ಲಕ್ಷ್ಮಣಶೆಟ್ಟಿ | ಸಿಡಬ್ಲೂ -06 |
| ವಯಸ್ಸು | - 21 ವರ್ಷ | |
| ಉದ್ಯೋಗ | - ವಿದ್ಯಾರ್ಥಿನಿ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 11-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿ ಗೊತ್ತು, ಅವರು ನಮ್ಮ ಎದುರುಮನೆಯ ವಾಸಿ. ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಿರುವ 2 ನೇ ಆರೋಪಿ ಗೊತ್ತು, ಆಕೆ ನನ್ನ ತಾಯಿ. ಮೃತ ಪೂರ್ಣಿಮ ನನ್ನ ತಂಗಿ, ಫ್ರಾಸಾ-1 ನನ್ನ ತಂದೆ, ಫ್ರಾಸಾ-2 ನನ್ನ ಅಜ್ಜಿ, ಫ್ರಾಸಾ-7-ನನ್ನ ಮಾವ ಅಂದರೆ ನನ್ನ ಸೋದರತ್ತೆಯ ಗಂಡ. ಚಾಸಾ-2 ರಿಂದ 4, 7, ಫ್ರಾಸಾ-3 ರಿಂದ 6, ಚಾಸಾ-12, 15, 17 ಗೊತ್ತು.

2. ನನ್ನ ತಂಗಿ ಪೂರ್ಣಿಮಾ 2021 ನೇ ಇಸ್ವಿಯಲ್ಲಿ ಎಸ್.ಬಿದರೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ 10 ನೇ ತರಗತಿ ವ್ಯಾಸಾಂಗ ಮಾಡುತ್ತಿದ್ದಳು. ಆ ಸಮಯದಲ್ಲಿ ನಾನು ಚಿಕ್ಕಮಗಳೂರಿನ ಬಿ ಸಿ ಎಂ ಹಾಸ್ಟೆಲ್ ನಲ್ಲಿ ಇದ್ದುಕೊಂಡು ದ್ವಿತೀಯ ಪಿಯುಸಿ ಓದುತ್ತಿದ್ದೆನು. 1 ನೇ ಆರೋಪಿ ಹಾಗೂ ನನ್ನ ತಾಯಿಯಾದ 2 ನೇ ಆರೋಪಿಯ ನಡುವೆ ಅಕ್ರಮ ಸಂಬಂಧ ಇದ್ದ ಬಗ್ಗೆ ನನ್ನ ತಂಗಿ ಪೂರ್ಣಿಮಾಳಿಗೆ ತಿಳಿದು

ಬಂದಿತ್ತು. ನನ್ನ ತಾಯಿ ಮತ್ತು 1 ನೇ ಆರೋಪಿ ಎಸ್ ಬಿದರೆ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ಒಟ್ಟಿಗೆ ಇದ್ದುದನ್ನು ನನ್ನ ತಂಗಿ ನೋಡಿದ್ದಳು. ಆಕೆ ಸದರಿ ವಿಚಾರವನ್ನು ನನ್ನ ತಂದೆಗೆ ತಿಳಿಸಿದ್ದಳು. ಆ ವಿಚಾರವಾಗಿ ನನ್ನ ತಂದೆ ಮತ್ತು ನನ್ನ ತಾಯಿಯ ನಡುವೆ ತುಂಬಾ ಗಲಾಟೆಯಾಗುತ್ತಿತ್ತು.

3. ದಿನಾಂಕಃ 02-03-2021 ರಂದು ನನ್ನ ತಂಗಿ ಪೂರ್ಣಿಮಾ ಶಾಲೆಗೆ ಹೋಗಿ ವಾಪಾಸ್ ಬರುತ್ತಿರುವಾಗ, 1 ನೇ ಆರೋಪಿ ಆಕೆಯನ್ನು ಮಾತನಾಡಿಸಿ, ತನ್ನ ಮತ್ತು ನನ್ನ ತಾಯಿಯ ನಡುವಿನ ಅಕ್ರಮ ಸಂಬಂಧವನ್ನು ಯಾರಿಗೂ ಹೇಳಬೇಡ, ಹೇಳಿದರೆ ನಿನ್ನನ್ನು ಶಾಲೆಗೆ ಹೋಗಲು ಬಿಡುವುದಿಲ್ಲ ಎಂದು ಹೆದರಿಸಿದ್ದನು. ಆ ವಿಚಾರವನ್ನು ನನ್ನ ತಂಗಿ ನನ್ನ ತಂದೆಗೆ ತಿಳಿಸಿದ್ದು, ನಂತರ ನನ್ನ ತಂದೆಯಿಂದ ನನಗೆ ತಿಳಿಯಿತು. ತನ್ನ ಮತ್ತು 1 ನೇ ಆರೋಪಿಯ ನಡುವಿನ ಅಕ್ರಮ ಸಂಬಂಧವನ್ನು ನನ್ನ ತಂದೆಗೆ ಮತ್ತು ಮನೆಯವರಿಗೆ ನನ್ನ ತಂಗಿ ಪೂರ್ಣಿಮಾ ತಿಳಿಸಿದ್ದರಿಂದ 2 ನೇ ಆರೋಪಿ ನನ್ನ ತಂಗಿಯನ್ನು ಕುರಿತು ಏನಾದರೂ ಮಾಡಿಕೊಂಡು ಸಾಯಿ ಎಂದು ಹೇಳಿ ಪ್ರತೀ ದಿನ ಹಿಂಸೆ ಕೊಡುತ್ತಿದ್ದರು. ಅದನ್ನು ನನ್ನ ತಂಗಿ ಪೂರ್ಣಿಮಾ ತನ್ನ ಮನಸ್ಸಿಗೆ ಹಚ್ಚಿಕೊಂಡು, ಕೊರಗುತ್ತಿದ್ದಳು. ಆ ವಿಚಾರವನ್ನು ನನ್ನ ತಂಗಿ ನನ್ನ ತಂದೆಗೆ ತಿಳಿಸಿದ್ದು , ನನ್ನ ತಂದೆಯಿಂದ ನನಗೆ ತಿಳಿಯಿತು.

4. ದಿನಾಂಕಃ 07-03-2021 ರಂದು ನಮ್ಮ ಮನೆಯಲ್ಲಿ ನನ್ನ ತಂಗಿ ಪೂರ್ಣಿಮಾ ಓದುತ್ತಾ ಕುಳಿತಿದ್ದು, ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮನೆಯಲ್ಲಿ ತುಂಬಾ

ಜಗಳವಾಗುತ್ತಿದ್ದರಿಂದ ಮತ್ತು 1 ಮತ್ತು 2 ನೇ ಆರೋಪಿತರು ಆಕೆಗೆ ನೀಡುತ್ತಿದ್ದ ಹಿಂಸೆಯಿಂದ ಕೊರಗಿ, ಬೆಳಿಗ್ಗೆ 9.30 ರಿಂದ 10.30 ಗಂಟೆಯ ಒಳಗೆ ತನ್ನ ವೇಲಿನಿಂದ ಮಂಚದ ಮೇಲಿನ ಕಂಟಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಆ ವಿಚಾರ ಬೆಳಿಗ್ಗೆ 11.30 ಗಂಟೆಗೆ ನನ್ನ ಅತ್ತೆಯಿಂದ ನನಗೆ ತಿಳಿಯಿತು. ವಿಚಾರ ತಿಳಿದು, ನಾನು ಮನೆಗೆ ಹೋಗಿ ನೋಡಿದಾಗ ನನ್ನ ತಂಗಿಯ ಶವವನ್ನು ಕೆಳಗೆ ಇರಿಸಲಾಗಿತ್ತು. ಆ ಬಗ್ಗೆ ನನ್ನ ತಂದೆ ಆರೋಪಿತರ ವಿರುದ್ಧ ದೂರನ್ನು ಕೊಟ್ಟರು.

5. ನಂತರ ಮಾರನೇ ದಿನ ಅಂದರೆ ದಿನಾಂಕಃ 08-03-2021 ರಂದು ನನ್ನ ತಂಗಿಯ ಮರಣೋತ್ತರ ಪರೀಕ್ಷೆಯನ್ನು ನಡೆಸುವ ಸಂದರ್ಭದಲ್ಲಿ ನನ್ನನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಪೊಲೀಸರು ಕರೆಯಿಸಿದ್ದರು. ನನ್ನ ತಂಗಿಯ ಕುತ್ತಿಗೆ ಭಾಗದಲ್ಲಿ ನೇಣಿನ ಗುರುತು ಕಂಡು ಬಂದಿತು. ಅಲ್ಲಿ ಪೊಲೀಸರು ನನ್ನನ್ನು ವಿಚಾರಿಸಿದರು, ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ, ಹೇಳಿಕೆ ನೀಡಿದ್ದೇನೆ. ಆರೋಪಿತರ ಅಕ್ರಮ ಸಂಬಂಧ ನನ್ನ ತಂಗಿಗೆ ಗೊತ್ತಾಗಿದ್ದರಿಂದ ಮತ್ತು ಅವರು ಆಕೆಯನ್ನು ಹೆದರಿಸಿ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೆ ಮನಸ್ಸಿಗೆ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಹಾಗಾಗಿ ಆರೋಪಿತರು ನನ್ನ ತಂಗಿಯ ಸಾವಿಗೆ ಕಾರಣಾಗಿರುತ್ತಾರೆ.

6. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ನನ್ನ ತಂಗಿ ಪೂರ್ಣಿಮಾಳ ಶವ ಕಂಡು ಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿ.ಪಿ. 8 ಮತ್ತು 9 ಎಂದು ಗುರುತಿಸಲಾಯಿತು.

**(ಪಾಟೀ ಸವಾಲು: ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ